# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 730
ಸದಸ್ಯರ ಹೆಸರು : ಶ್ರೀ ವೈ.ಎಂ. ಸತೀಶ್
(ಸ್ಥಳೀಯ ಸಂಸ್ಥೆಗಳ ಕ್ಷೇತ್ರದಿಂದ)
ಉತ್ತರಿಸುವ ದಿನಾಂಕ : 21.08.2026
ಉತ್ತರಿಸುವ ಸಚಿವರು : ಮಾನ್ಯ ಜಲಸಂಪನ್ಮೂಲ ಸಚಿವರು

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ಬಳ್ಳಾರಿ ಜಿಲ್ಲೆ ಸಿರುಗುಪ್ಪ ತಾಲ್ಲೂಕು ಕರೂರು ಏತ ನೀರಾವರಿ ಯೋಜನೆಯು ಯಾವಾಗ ಶುರುವಾಯಿತು; ಇದೀಗ ಯಾವ ಹಂತದಲ್ಲಿದೆ; (ಸಂಪೂರ್ಣ ವಿವರಗಳನ್ನು ಒದಗಿಸುವುದು) | ಬಳ್ಳಾರಿ ಜಿಲ್ಲೆ ಸಿರುಗುಪ್ಪ ತಾಲ್ಲೂಕಿನ ಕರೂರು ಗ್ರಾಮದ ದೊಡ್ಡ ಹಳ್ಳದ ಹತ್ತಿರ 10.50 ಕ್ಯೂಸೆಕ್ಸ್ ನೀರನ್ನೆತ್ತಿ ಕೂರಿಗನೂರು ಕಾಲುವೆಗೆ ನೀರನ್ನು ಹರಿಸಿ, ಕರೂರು, ಮಾಡಿಸೂಗೂರು ಮತ್ತು ಕೂರಿಗನೂರು ಗ್ರಾಮಗಳ ಸುಮಾರು 635 ಎಕರೆ ಪ್ರದೇಶಕ್ಕೆ ನೀರಾವರಿ ಸೌಲಭ್ಯ ಕಲ್ಪಿಸುವ ಕರೂರು ಏತ ನೀರಾವರಿ ಯೋಜನೆಯನ್ನು ದಿನಾಂಕ:07.02.2000ರಲ್ಲಿ ಪ್ರಾರಂಭಿಸಲಾಗಿದ್ದು, ಕಾಮಗಾರಿಯು ಪೂರ್ಣಗೊಂಡಿದೆ. |
| ಆ) | ಇದೀಗ Raising Main ಪೈಪುಗಳ ಬದಲಾಗಿ ಹೊಸದಾಗಿ MS (Mild Steel) ಪೈಪುಗಳನ್ನು ಅಳವಡಿಸಲು ಮತ್ತು ಇತರೆ ಕಾಮಗಾರಿಗಳಿಗೆ ಒಟ್ಟು 9.50 ಕೋಟಿಗಳ ಅನುದಾನದ ಅವಶ್ಯಕತೆ ಇದ್ದು ಇದಕ್ಕೆ ಇಲಾಖೆ ಮತ್ತು ಸರ್ಕಾರದ ತೀರ್ಮಾನಗಳೇನು; ಯಾವ ಕಾಲಮಿತಿಯಲ್ಲಿ ಅನುದಾನ ಒದಗಿಸಿ, ಕಾಮಗಾರಿಗಳನ್ನು ಪೂರ್ಣಗೊಳಿಸಲಾಗುವುದು; | ಸದರಿ ಯೋಜನೆಯಲ್ಲಿ ಕರೂರು ಮತ್ತು ಮಾಟಸೂಗೂರು ರಸ್ತೆಯ ಹತ್ತಿರ ಇರುವ ಹಳ್ಳದ 30 ಮೀಟರ್ ಉದ್ದದ Raising main ಪೈಪುಗಳು ಪ್ರವಾಹದಲ್ಲಿ ಕೊಚ್ಚಿ ಹೋಗಿದ್ದು ಇದನ್ನು ಸರಿಪಡಿಸಲಾಗಿರುತ್ತದೆ.<br>ಮುಂದುವರೆದು, ಈ ಯೋಜನೆಯಲ್ಲಿ ಸುಮಾರು 25 ವರ್ಷಗಳ ಹಿಂದೆ Raising mainಗೆ ಅಳವಡಿಸಲಾಗಿರುವ NP2 ಪೈಪುಗಳು ಹಾಳಾಗಿದ್ದು, ಹೊಸದಾಗಿ MS (Mild Steel) ಪೈಪುಗಳನ್ನು ಅಳವಡಿಸುವ ಬಗ್ಗೆ ನಿಗಮದಲ್ಲಿ ತಾಂತ್ರಿಕವಾಗಿ ಪರಿಶೀಲಿಸಲಾಗುತ್ತಿದೆ. |
| ಇ) | ನೀರಾವರಿ ಯೋಜನೆಯ ಕಾಮಗಾರಿಗಳನ್ನು ಪ್ರಾರಂಭ ಮಾಡುವ ಸಂದರ್ಭದಲ್ಲಿ ಒಂದು ನಿಗದಿತ ಕಾಲವಧಿಯಲ್ಲಿ ಮುಗಿಸಲು ಸಾಧ್ಯವಾಗುತ್ತಿಲ್ಲವೇಕೆ ಇದಕ್ಕೆ ಕಾರಣಗಳೇನು? (ವಿವರ ಒದಗಿಸುವುದು) | ನೀರಾವರಿ ಯೋಜನೆಗಳು ನಿಗದಿತ ಕಾಲವಧಿಯಲ್ಲಿ ಪೂರ್ಣಗೊಳಿಸಲು ಇರುವ ಪ್ರಮುಖ ತೊಡಕುಗಳು:-<br>1. ಖಾಸಗಿ ಜಮೀನು ಸ್ವಾಧೀನ, ಪರಿಹಾರ ಪಾವತಿ, ಭೂಮಾಲೀಕರ ಆಕ್ಷೇಪಣೆ ಹಾಗೂ ನ್ಯಾಯಾಲಯದ ಪ್ರಕರಣಗಳು.<br>2. ಮುಳುಗಡೆ ಪ್ರದೇಶದ ಜನರು ಸ್ಥಳಾಂತರಗೊಳ್ಳಬೇಕಾದ ಸಂದರ್ಭದಲ್ಲಿ ಪುನರ್ವಸತಿ ಮತ್ತು ಪುನರ್ ನಿರ್ಮಾಣ ಕಾಮಗಾರಿಗಳಲ್ಲಿನ ವಿಳಂಬ ಹಾಗೂ ಕೆಲ ಸಂದರ್ಭಗಳಲ್ಲಿ ಸ್ಥಳಾಂತರಗೊಳ್ಳಲು ಜನರು ಒಪ್ಪದಿರುವುದು.<br>3. ಅರಣ್ಯ ಭೂಮಿ ಒಳಗೊಂಡಿರುವ ಯೋಜನೆಗಳಿಗೆ ಅರಣ್ಯ, ಪರಿಸರ, ವನ್ಯಜೀವಿ ಸೇರಿದಂತೆ ವಿವಿಧ ಶಾಸನಬದ್ಧ ಅನುಮತಿಗಳನ್ನು ಪಡೆಯುವ ಪ್ರಕ್ರಿಯೆಯಲ್ಲಿನ ವಿಳಂಬ.<br>4. ಯೋಜನೆಗಳ ಅನುಷ್ಠಾನದಲ್ಲಿ ಕಂದಾಯ, ಅರಣ್ಯ, ಇಂಧನ, PWD, ರೈಲ್ವೆ, NHAI, ಸ್ಥಳೀಯ ಸಂಸ್ಥೆಗಳು ಮುಂತಾದ ಹಲವು ಇಲಾಖೆಗಳ ಅನುಮತಿ ಪಡೆಯುವ ಪ್ರಕ್ರಿಯೆಯಲ್ಲಿನ ವಿಳಂಬ. |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| | | 5. ಅನುಷ್ಠಾನದ ಸಂದರ್ಭದಲ್ಲಿ ಸ್ಥಳದ ನೈಜ ಪರಿಸ್ಥಿತಿ ಹಾಗೂ ತಾಂತ್ರಿಕ ಅವಶ್ಯಕತೆಗಳಿಗೆ ಅನುಗುಣವಾಗಿ ಹೆಚ್ಚುವರಿ ಕಾಮಗಾರಿಗಳನ್ನು ಕೈಗೊಳ್ಳುವ ಅಥವಾ ಮೂಲ ವಿನ್ಯಾಸದಲ್ಲಿ ಬದಲಾವಣೆ ಮಾಡುವ ಅಗತ್ಯ ಉಂಟಾದಲ್ಲಿ, ಸಕ್ಷಮ ಪ್ರಾಧಿಕಾರದ ಅನುಮೋದನೆ ಪಡೆಯುವ ಪ್ರಕ್ರಿಯೆಯಲ್ಲಿನ ವಿಳಂಬ.<br>6. ನಿರ್ಮಾಣ ಸಾಮಗ್ರಿಗಳ ಬೆಲೆ ಹಾಗೂ ಕಾರ್ಮಿಕ ವೆಚ್ಚದಲ್ಲಿ ಏರಿಕೆಯಿಂದ ಗುತ್ತಿಗೆದಾರರಿಗೆ ಆರ್ಥಿಕ ನಷ್ಟ ಉಂಟಾಗುವುದರಿಂದ, ಕಾಮಗಾರಿಯ ವೇಗದ ಮೇಲೆ ಪ್ರತಿಕೂಲ ಪರಿಣಾಮ.<br>7. ಗುತ್ತಿಗೆದಾರರ ಹಣಕಾಸಿನ ಸಮಸ್ಯೆ, ಕಾಮಗಾರಿ ನಿರ್ವಹಣೆಯಲ್ಲಿ ಲೋಪದೋಷ, ಗುತ್ತಿಗೆ ವಿವಾದ, ನ್ಯಾಯಾಂಗ ಪ್ರಕರಣ, ಗುತ್ತಿಗೆ ರದ್ದುಪಡಿಸಿ, ಮರುಟೆಂಡರ್ ಕರೆಯುವುದು ಇತ್ಯಾದಿ.<br>8. ಅತಿವೃಷ್ಟಿ, ಪ್ರವಾಹ, ಬರ ಮುಂತಾದ ಅನಿರೀಕ್ಷಿತ ಪರಿಸ್ಥಿತಿಗಳು.<br>9. ಇಲಾಖೆಯಡಿ ಅನುಮೋದಿತ ಕಾಮಗಾರಿ/ಯೋಜನೆಗಳ ಕಾರ್ಯಭಾರ ಅಧಿಕವಿದ್ದು, ಬಿಲ್ಲುಗಳು ಪಾವತಿಗೆ ಬಾಕಿರುತ್ತವೆ. ಇದರಿಂದಾಗಿ, ಪ್ರತಿವರ್ಷ ಆಯವ್ಯಯದಲ್ಲಿ ಲಭ್ಯವಾಗುವ ಅನುದಾನದಲ್ಲಿ ಎಲ್ಲಾ ಯೋಜನೆಗಳಿಗೆ ಅಗತ್ಯವಿರುವ ಅನುದಾನವನ್ನು ಎಲ್ಲಾ ಯೋಜನೆಗಳಿಗೆ ಅಗತ್ಯ ಕ್ರಮಾಣದಲ್ಲಿ ಹಂಚಿಕೆ ಮಾಡಿ, ಅವುಗಳನ್ನು ನಿಗದಿತ ಅವಧಿಯಲ್ಲಿ ಪೂರ್ಣಗೊಳಿಸುವುದು ಕಷ್ಟಸಾಧ್ಯವಾಗುತ್ತದೆ. |

**ಜಸಂಇ 100 ಎಂಎಲ್ಎ 2026**

**(ಎನ್. ಚಲುವರಾಯಸ್ವಾಮಿ)**
**ಜಲಸಂಪನ್ಮೂಲ ಸಚಿವರು.**